**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು**
**ಇಂಡಿ.**

**ಪಿ.ಸಿ.ನಂಃ 87/2021**
**ಪ್ರಾ.ಸಾ.1**

**ದಿನಾಂಕಃ 25–11–2021 ರಂದು ಪ್ರಮಾಣ ವಚನ ಭೋಧಿಸಲಾಯಿತುಃ**

**: ಫಿರ್ಯಾದಿಯ ಪ್ರಮಾಣಬದ್ಧ ಹೇಳಿಕೆಃ**

1) ದಿನಾಂಕ 28.05.2021 ರಂದು ಸುಮಾರು 5 ರಿಂದ 6 ಘಂಟೆಯವರೆಗೆ ನಮ್ಮ ಊರಿನ ಸುಮಾರು 15 ಜನರು ನಮ್ಮೂರಿನ ಸ್ಮಶಾನದ ಹತ್ತಿರ ಇಸ್ಪೆಟ ಆಡುತ್ತಿದ್ದು, ಆಗ ನಾನು ನಮ್ಮೂರಿನ ಬೀಟ್ ಪಿ.ಸಿ.ಯಾದ ಮಹೇಶ ಪವಾರ ಅವರಿಗೆ ಸದರಿ ವಿಷಯವನ್ನು ಫೋನ್ ಮಾಡಿ ತಿಳಿಸಿದ್ದು, ನಂತರ ಮಹೇಶ ಪವಾರ, ಇಮಾಮ ಯಲಗಾರ ಹಾಗೂ ಯುನುಸ್ ಕೊರಬು ರವರು ನಮ್ಮೂರಿನ ಬಸವೇಶ್ವರ ಸರ್ಕಲ್ ಹತ್ತಿರ ಬಂದು ಇಸ್ಪೇಟ ಆಡುವವರು ಪ್ರತಿ ತಿಂಗಳು ನಮಗೆ ಹಪ್ತಾ ಕೊಡುತ್ತಾರೆ, ನೀನೇನು ಹೇಳುತ್ತಿಯಾ ಮಗನೆ ಎಂದು ನನಗೆ ಹೊಡೆದರು. ನಂತರ ನನ್ನನ್ನು ಯುನುಸ್ ರವರ ಕಾರಿನಲ್ಲಿ ನಮ್ಮೂರಿನಿಂದ ಸುಮಾರು 6-7 ಕಿ.ಮೀ. ದೂರದಲ್ಲಿರುವ ಗೊರನಾಳ ಕ್ರಾಸಿಗೆ ಕರೆದುಕೊಂಡು ಬಂದು ಜೋರು ಜುಲುಮೆಯಿಂದ ನನಗೆ ಸಾರಾಯಿ ಕುಡಿಸಿ, ನನಗೆ ಹೊಡೆದು ನನ್ನ ಕಿಸೆಯಲ್ಲಿದ್ದ ದುಡ್ಡನ್ನು ತೆಗೆದುಕೊಂಡಿರುತ್ತಾರೆ.

2) ಅಲ್ಲಿಂದ ಇಂಡಿ ಗ್ರಾಮೀಣ ಪೋಲೀಸ ಠಾಣೆಯ ಪಿ.ಎಸ್.ಐ. ರವರಾದ ಮಾಳಪ್ಪ ಪೂಜಾರಿಯವರ ಹತ್ತಿರ ನನ್ನನ್ನು ಕರೆದುಕೊಂಡು ಹೋಗಿದ್ದು, ಪೋಲೀಸ ಠಾಣೆಯಲ್ಲಿ ಚೌಧರಿ ಎಂದು ಕರೆಯುತ್ತಿದ್ದ ಪೋಲೀಸರು ನನ್ನ ಟೊಂಕಿನ ಮೇಲೆ ಎಚ್.ಡಿ.ಪಿ. ಪೈಪಿನಿಂದ ಹೊಡೆದಾಗ ನಾನು ಕೆಳಗೆ ಬಿದ್ದಿದ್ದು, ಪಿ.ಎಸ್.ಐ. ಹಾಗೂ ಮಹೇಶ ಪವಾರ ಅವರು ನನ್ನ ಎರಡೂ ಕಾಲುಗಳ ಮೇಲೆ ಅವರ ಕಾಲುಗಳನ್ನಿಟ್ಟು ನನ್ನ ಅಂಗಾಲಿಗೆ ಪೈಪಿನಿಂದ ಹೊಡೆದಿರುತ್ತಾರೆ. ನಂತರ ನನ್ನನ್ನು ಎಬ್ಬಿಸಿದರು. ಮಹೇಶ ಪವಾರ ಅವರು ಪೈಪಿನಿಂದ ಹಾಗೂ ಮಾಳಪ್ಪ ಪೂಜಾರಿಯವರು ಬೆಲ್ಟಿನಿಂದ ನನ್ನ ಮೊಳಕಾಲ ಕೆಳಗಡೆ, ನನ್ನ ಅಂಡೆಯ ಚಪ್ಪೆಗೆ ಹಾಗೂ ಸೊಂಟಕ್ಕೆ ಹೊಡೆದಿರುತ್ತಾರೆ. ನಂತರ ನನಗೆ ಅರೆಪ್ರಜ್ಞೆಯಾಗಿದ್ದು, ನನ್ನ ಎಡಗಾಲಿಗೆ ಕಲ್ಲು ನಾಟಿತ್ತು. ನಂತರ ಪಿ.ಎಸ್.ಐ. ರವರು ನನ್ನನ್ನು ಎಲ್ಲಿಯಾದರೂ ಚರಂಡಿಗೆ ಒಯ್ದು ಒಗೆಯಿರಿ, ಸತ್ತರೆ ಸಾಯಲಿ ಎಂದು ಹೇಳಿದ್ದು, ಇಸ್ಪೇಟ ಆಡುವವರು ಪ್ರತಿ

ತಿಂಗಳು ನಮಗೆ ಪೋಲೀಸ ಠಾಣೆಗೆ ಬಂದು ಹಪ್ತ ಕೊಡುತ್ತಿದ್ದು, ನೀನೇನು ಹೇಳುತ್ತೀಯಾ, ಹೊಲಗೇರಿ ಮಗ, ಬೋಳಿ ಮಗ, ಸೂಳೆ ಮಗ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಮಾಳಪ್ಪ ಪೂಜಾರಿಯವರು ಪೋಲೀಸ ಠಾಣೆಯಲ್ಲಿ ನನ್ನ ಬಾಯಿಗೆ ಬೂಟು ಇಟ್ಟಿರುತ್ತಾರೆ.

3) ಅಲ್ಲಿಂದ ನನ್ನನ್ನು ಹಿರೇಮಸಳಿ ಕ್ರಾಸಿಗೆ ಕರೆದುಕೊಂಡು ಹೋಗಿದ್ದು, ನಾನು ಅರೆಪ್ರಜ್ಞಾವಸ್ಥೆಯಲ್ಲಿದ್ದಾಗ ನನ್ನ ತಲೆ ಹಾಗೂ ನನ್ನ ಬಾಯಿಗೆ ಮಹೇಶ ಪವಾರ ಅವರು ನೀರು ಹಾಕಿದ್ದು, ಚೌಧರಿಯವರು ಪೈಪಿನಿಂದ ನನ್ನ ದೇಹದ ಎಲ್ಲಾ ಭಾಗಕ್ಕೆ ಹೊಡೆದಿದ್ದು, ಇಮಾಮ ಯಲಗಾರ ಹಾಗೂ ಯುನುಸ್ ರವರು ನನಗೆ ಕೈಗಳಿಂದ ಹೊಡೆದಿರುತ್ತಾರೆ. ನಂತರ ನನಗೆ ಪೂರ್ಣ ಪ್ರಜ್ಞೆ ತಪ್ಪಿದ್ದು, ನನ್ನನ್ನು ಹಿರೇಮಸಳಿ ಗ್ರಾಮದ ಬಸವೇಶ್ವರ ಸರ್ಕಲ್ ಹತ್ತಿರ ಇರುವ ಚರಂಡಿಯಲ್ಲಿ ಒಗೆದು ಹೋಗಿರುತ್ತಾರೆ.

4) ಅಲ್ಲಿಂದ ನನ್ನನ್ನು ಅಂಬ್ಯುಲೆನ್ಸದಲ್ಲಿ ನನ್ನ ತಂದೆ ಹಾಗೂ ಚಿಕ್ಕಪ್ಪರವರು ಇಂಡಿ ಸರಕಾರಿ ದವಾಖಾನೆಗೆ ಕರೆದುಕೊಂಡು ಹೋಗಿರುತ್ತಾರೆ. ಅಲ್ಲಿಂದ ಮುಂದಿನ ಚಿಕಿತ್ಸೆಗಾಗಿ ವಿಜಯಪುರದ ದವಾಖಾನೆಗೆ ಕರೆದುಕೊಂಡು ಹೋಗಿರುತ್ತಾರೆ. ಇಂಡಿ ದವಾಖಾನೆಯಲ್ಲಿ ಡಾಕ್ಟರು ನನಗೆ ವಿಚಾರಿಸಿದ್ದು, ಘಟನೆಯ ಬಗ್ಗೆ ನಾನು ಹೇಳಿರುತ್ತೇನೆ. ವಿಜಯಪುರದ ಸಿವಿಲ್ ಆಸ್ಪತ್ರೆಯಲ್ಲಿ ನಾನು ಒಂದು ರಾತ್ರಿ ಇರುತ್ತೇನೆ. ಅಲ್ಲಿ ಕೊರೊನಾ ಪೇಶಂಟಗಳಿವೆ ಬೇರೆ ಆಸ್ಪತ್ರೆಯಲ್ಲಿ ತೋರಿಸಿಕೊಳ್ಳಿರಿ ಎಂದು ಹೇಳಿದಾಗ ವಿಜಯಪುರದ ಸಂಜೀವಿನ ಸುಪರ ಸ್ಪೆಷಾಲಿಟಿ ಆಸ್ಪತ್ರೆಗೆ ನಾವು ಹೋಗಿರುತ್ತೇವೆ. ವಿಜಯಪುರದ ಸಿವಿಲ್ ದವಾಖಾನೆಯಲ್ಲಿ ಡಾಕ್ಟರಗೆ ನಾನು ಆರೋಪಿತರು ಹೊಡಿಬಡಿ ಮಾಡಿದ್ದನ್ನು ತಿಳಿಸಿದ್ದು, ಆನಲೈನ್ ಮುಖಾಂತರ ಕಂಪ್ಲೆಂಟ ಆಗುತ್ತದೆಂದು ಪೇಪರ ಮೇಲೆ ನನ್ನ ಸಹಿ ಪಡೆದಿರುತ್ತಾರೆ. ನಂತರ ನಾನು ಸಂಜೀವಿನಿ ಆಸ್ಪತ್ರೆಯಲ್ಲಿ ದಾಖಲಾಗಿರುತ್ತೇನೆ. ಸಂಜೀವಿನಿ ಆಸ್ಪತ್ರೆಗೆ ಇಬ್ಬರು ಪೋಲೀಸರು ಬಂದು ನನ್ನನ್ನು ನೋಡಿಕೊಂಡು ಹೋಗಿದ್ದು, ಅವರಲ್ಲಿ ಒಬ್ಬರ ಹೆಸರು ನಡುವಿನಕೇರಿ ಇದ್ದು, ಇನ್ನೊಬ್ಬರ ಹೆಸರು ನನಗೆ ಗೊತ್ತಿಲ್ಲ. ಪೋಲಿಸರು ನನ್ನನ್ನು ಆಸ್ಪತ್ರೆಯಲ್ಲಿ ವಿಚಾರಿಸಿರುವುದಿಲ್ಲ.

5) ದಿನಾಂಕ 9-6-2021 ರಂದು ನಾನು ಸಂಜೀವಿನಿ ಆಸ್ಪತ್ರೆಯಿಂದ ಬಿಡುಗಡೆಗೊಂಡು, ಮರುದಿನ ದಿನಾಂಕ 10-6-2021 ರಂದು ವಿಜಯಪುರದ ಎಸ್.ಪಿ. ಆಫೀಸಿಗೆ ಹೋಗಿ ನಡೆದ ಘಟನೆಯ ಬಗ್ಗೆ ನಾನು ಹೇಳಿದ್ದು, ಪೋಲೀಸರ ಮೇಲೆಯೇ ಕಂಪ್ಲೆಂಟ ಕೊಡುತ್ತೀಯಾ ಎಂದು ನನಗೆ ಬೈದು ಕಳುಹಿಸಿರುತ್ತಾರೆ. ನಂತರ ನಾನು ನ್ಯಾಯಾಲಯದಲ್ಲಿ ಕೇಸು ಮಾಡಿರುತ್ತೇನೆ.

6) ಮುಂದುವರೆದ ಪ್ರಮಾಣಪತ್ರ ಹೇಳಿಕೆಗಾಗಿ ಸಮಯಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೆ ಸರಿ ಅದೆ

**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಂ.ಎಫ್.ಸಿ. ನ್ಯಾಯಾಧೀಶರು,**

ಇಂಡಿ.